**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ**

**ಎಸ್.ಸಿ ನಂಃ 10015/2019**

**ಫಿರ್ಯಾದಿದಾರರು : ದೊಡ್ಡಬಳ್ಳಾಪುರ ನಗರ ಪೋಲೀಸ್ ಠಾಣೆ**

**ವಿರುದ್ದ**

**ಆರೋಪಿ : ಆನಂದ ಎಸ್ ಅಲಿಯಾಸ್ ಕಬಾಬ್ ಆನಂದ**

**ದೋಷಾರೋಪಣೆ**

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ, 4ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರಾದ ಶ್ರೀ ಸಿ. ಚಂದ್ರಶೇಖರ್ ಆದ ನಾನು ಈ ಕೆಳಕಂಡ ಆರೋಪಿಯಾದಃ

ಆನಂದ ಎಸ್ ಅಲಿಯಾಸ್ ಕಬಾಬ್ ಆನಂದ ಬಿನ್ ಸತೀಶ್, 22 ವರ್ಷ, ವಾಸಃ ದೇವರಾಜನಗರ, ಕೊಂಗಾಡಿಯಪ್ಪ ಕಾಲೇಜು ರಸ್ತೆ, ದೊಡ್ಡಬಳ್ಳಾಪುರ

**ನಿಮ್ಮ ವಿರುದ್ಧ ಮಾಡಲಾದ ದೋಷರೋಪಣೆ ಏನೆಂದರೆಃ**

ದೊಡ್ಡಬಳ್ಳಾಪುರ ನಗರ ಪೋಲೀಸು ಠಾಣಾ ಸರಹದ್ದು ದೇವರಾಜನಗರ ವಾಸಿಯಾದ ನೀವು ಮತ್ತು ಚಾಸಾ 1 ಮಂಜುನಾಥ ಇವರ ತಮ್ಮ ಎನ್.ಗಂಗಾಧರ ಅಲಿಯಾಸ್ ದಾಸ ಇಬ್ಬರೂ ಸ್ನೇಹಿತರಾಗಿದ್ದು ಗಂಗಾಧರನು ಶಬರಿಮಲೆಗೆ ಹೋಗಲು ಖರ್ಚಿಗೆ ಹಣ ಕೊಡುವಂತೆ ನಿಮ್ಮನ್ನು ಕೇಳಿದಾಗ ನೀವು ಕೊಡದೇ ಇದ್ದುದರಿಂದ ನಿಮ್ಮಗಳ ಮದ್ಯೆ ಜಗಳವಾಗಿ ವೈಷಮ್ಯವಿದ್ದು, ದಿಃ 07.01.2019 ರಂದು ರಾತ್ರಿ ಸುಮಾರು 9.15 ಗಂಟೆಯಲ್ಲಿ ನಿಮ್ಮನ್ನು ಹೊಡೆಯಬೇಕೆಂದು ಗಂಗಾಧರನು ಖಾರದ ಪುಡಿ ಪೊಟ್ಟಣ ಮತ್ತು ಮಚ್ಚನ್ನು ತನ್ನ ಜರ್ಕಿನ್‌ನಲ್ಲಿ ಇಟ್ಟುಕೊಂಡು ಪ್ರೀತಿ ವೈನ್ಸ್ ಸರ್ಕಲ್ ಬಳಿ ಮೆಡಿಕಲ್ ಶಾಪ್ ಹತ್ತಿರ ಬಂದು ಚಾಸಾ-2 ರವರ ಮೂಲಕ ಏನೋ ಮಾತನಾಡಬೇಕೆಂದು ನಿಮ್ಮನ್ನು ಕರೆಸಿಕೊಂಡು ನೀವಿಬ್ಬರೂ ಕತ್ತಿನ ಪಟ್ಟಿ ಹಿಡಿದುಕೊಂಡು ಎಳೆದಾಡುತ್ತಿದ್ದಾಗ ಗಂಗಾಧರನ ಜೇಬಿನಿಂದ ಕೆಳಗೆ ಬಿದ್ದ

**ಖಾರದಪುಡಿ ಪೊಟ್ಟಣ ಮತ್ತು ಮಚ್ಚನ್ನು ತೆಗೆದುಕೊಂಡು ನಿಮಗೆ ಹೊಡೆಯಲು ಬಂದಾಗ ನೀವು ಮಚ್ಚನ್ನು ಕಿತ್ತುಕೊಂಡು ಗಂಗಾಧರನನ್ನು ಕೊಲೆ ಮಾಡಬೇಕೆಂದು ಆತನ ತಲೆಯು ಮೇಲೆ ಹೊಡೆದಿದ್ದು ಆತ ಕೆಳಗೆ ಬಿದ್ದಾಗ ಆತನ ಮುಖ ಮತ್ತು ತಲೆಯು ಮೇಲೆ ಖಾರದ ಪುಡಿಯನ್ನು ಎರಚಿ ಮಚ್ಚಿನಿಂದ ಗಂಗಾಧರನ ಮುಖ, ಕುತ್ತಿಗೆ, ಎಡಕೆನ್ನೆ, ಎಡಕೈಗೆ 7-8 ಸಲ ಜೋರಾಗಿ ಹೊಡೆದು ಬೀಕರವಾಗಿ ಕತ್ತರಿಸಿ ಕೊಲೆ ಮಾಡಿ ಭಾ.ದಂ.ಸಂ. ಕಲಂ.302 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿದ್ದು,**

**ಎರಡನೇಯದಾಗಿ ಅದೇ ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭದಲ್ಲಿ ನೀವು ಗಂಗಾಧರನ ತಲೆ ಮೇಲೆ ಮಚ್ಚಿನಿಂದ ಹೊಡೆದಾಗ ಅಲ್ಲೇ ಇದ್ದ ಚಾಸಾ 2 ಪವನ್‌ಕುಮಾರ್ ಕೆ.ಜಿ ಅಲಿಯಾಸ್ ಪವನ ಅಲಿಯಾಸ್ ಬೆಂಕಿ ರವರು ದಾಸನಿಗೆ ಹೊಡೆಯಬೇಡ ಎಂದು ಬಿಡಿಸಿಕೊಳ್ಳಲು ಬಂದಾಗ ಆತನನ್ನು ಕೊಲೆ ಮಾಡುವ ಉದ್ದೇಶದಿಂದ ಅದೇ ಮಚ್ಚಿನಿಂದ ಚಾಸಾ-2 ರವರ ಬಲತಲೆ, ಎಡಕೈಗೆ ಹೊಡೆದು ಮಚ್ಚಿನ ಹಿಡಿಯಿಂದ ಬಾಯಿಗೆ ಗುದ್ದಿ ಗಂಭೀರ ಸ್ವರೂಪದ ರಕ್ತಗಾಯಗಳನ್ನುಂಟು ಮಾಡಿ ಭಾ.ದಂ.ಸಂ. ಕಲಂಃ 307 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.**

**ಮೇಲೆ ಹೇಳಿದ ಆರೋಪಗಳ ವಿಚಾರಣೆಯು ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದರಿಂದ ನೀವು ನನ್ನಿಂದ ವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.**

**(ಸಿ. ಚಂದ್ರಶೇಖರ್ )**
**4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.**

**ದಿನಾಂಕಃ 09.09.2019.**